# ಒಡನಾಟ

ಯಾರು ತುಂಬಾ ಇಷ್ಟ, ಯಾರು ಅಗಾಧ ಪ್ರಭಾವ ಬೀರಿದವರು ಅನ್ನುವುದಕ್ಕೆ ಉತ್ತರ ಕೊಡೋದು ಕಷ್ಟ. ರವೀಂದ್ರನಾಥ ಟ್ಯಾಗೋರರ ಅನುವಾದಿತ ಸಣ್ಣ ಕತೆಗಳಿಂದ ತೊಡಗಿ ಶಿವರಾಮ ಕಾರಂತರವರೆಗೆ ಎಲ್ಲಾ ಲೇಖಕರನ್ನೂ, ಲೇಖಕಿಯರನ್ನೂ ಓದಿದವಳು ನಾನು. ಒಂದೊಂದು ಕೃತಿ ಒಂದೊಂದು ಕಾರಣದಿಂದ ಮೆಚ್ಚುಗೆಯಾಗುತ್ತಿತ್ತು. ನಿರ್ದಿಷ್ಟವಾಗಿ ಇಂತವರೇ ಎಂದು ಹೇಳಲು ಸಾಧ್ಯವಿಲ್ಲ. ಇಂತವರು ಅಂತ ಬೆಟ್ಟು ಮಾಡಿ ಹೇಳೋಕೆ ಸಾಧ್ಯ ಇಲ್ದಿದ್ರೂ ನನ್ನ ಓದು ನನ್ನ ಬರವಣಿಗೆಗೆ ಪ್ರೇರಕವಾಗಿದೆ ಅನ್ನಬಹುದು.

- **ಮನುಷ್ಯನ ಭಾವಕೇಂದ್ರದ ಮೂಲಸೆಲೆಗಳನ್ನು ಸಹಜವಾಗಿ, ಸೂಕ್ಷ್ಮವಾಗಿ ತಡಕಾಡುತ್ತಾ ಅದನ್ನು ತಾಜಾ ಆಗಿ ಕತೆಗಳಲ್ಲಿ ಅಭಿವ್ಯಕ್ತಿಸುತ್ತಾ, ಸಂಬಂಧಗಳ ಒಳನೆಯ್ಗೆಗಳನ್ನು ಕಲಾತ್ಮಕವಾಗಿ ಶೋಧಿಸುವ ನಿಮ್ಮ ಬರಹ ರೂಪುಗೊಳ್ಳುವ ಬಗೆ ಹೇಗೆ? ಒಂದು ಕತೆ, ಕಾದಂಬರಿಯನ್ನು ಕಟ್ಟುವ ನಿಮ್ಮ ವಿಧಾನ ಯಾವ ರೀತಿಯದು?**

ಶೂನ್ಯದಿಂದ ಸಾಹಿತ್ಯ ಸೃಷ್ಟಿಯಾಗೊಲ್ಲ ಅನ್ನೋ ಒಂದು ಮಾತಿದೆ. ಕಂಡ, ಕೇಳಿದ, ಅನುಭವಿಸಿದ ಘಟನೆಯೊಂದರ ತುಣುಕು ಮನಸ್ಸನ್ನು ಕೆಣಕಿ ಅದನ್ನು ಕತೆಯಾಗಿಸಲು ಪ್ರೇರೇಪಿಸಿದಾಗ ವಾಸ್ತವತೆ ಕಲ್ಪನೆಯ ಗರಿ ಬೆಳೆಸಿಕೊಂಡು, ತನ್ನ ಮೂಲರೂಪವನ್ನೇ ಮರೆಸುವಷ್ಟು ಬದಲಾದದ್ದಿದೆ. ಅದೇನಿದ್ದರೂ ಕತೆ ಸಹಜತೆಯ ಚೌಕಟ್ಟನ್ನು ಮೀರದಂತೆ, ಪಾತ್ರಗಳು ನೆಲ ಬಿಟ್ಟು ಆಕಾಶಕ್ಕೆ ಜಿಗಿಯದಂತೆ ನಾನು ಪ್ರಾಮಾಣಿಕವಾಗಿ ಪ್ರಯತ್ನಿಸ್ತೀನಿ. ನನ್ನ ಹೆಚ್ಚಿನ ಕತೆಗಳ ಪಾತ್ರಗಳು ನಮ್ಮ ಸುತ್ತಮುತ್ತ ಕಾಣುವಂತಹ ಮಧ್ಯಮ, ಕೆಳಮಧ್ಯಮವರ್ಗದ ಜೀವನದಿಂದ ನೇರವಾಗಿ ಎದ್ದು ಬಂದಂತವುಗಳು. ನನ್ನ ಕಥಾಪಾತ್ರಗಳು ನಿಜಜೀವನದಿಂದ ಹೆಕ್ಕಿ ತೆಗೆದಂತವುಗಳಾಗಿದ್ದರೂ ದಟ್ಟ ಪ್ರಸಾಧನಗಳಿಂದ ಅವರಿಗೇ ಅವರ ಗುರುತು ಸಿಕ್ಕದ ಹಾಗೆ ಚಿತ್ರಿಸೋದು ನನ್ನ ಪರಿ. ಕತೆಯ ಆರಂಭ ಅಂತ್ಯಗಳ ಬಗ್ಗೆ ಒಂದು ನಿರ್ದಿಷ್ಟ ಕಲ್ಪನೆ ಇಟ್ಟುಕೊಂಡು ಬರೆದರೂ ಕೆಲವೊಮ್ಮೆ ಪೂರ್ವಯೋಜಿತ ಅಂತ್ಯವನ್ನೂ ತನ್ನ ವಶಕ್ಕೆ ತೆಗೆದುಕೊಂಡು ಕತೆ ಇನ್ನೊಂದೇ ರೀತಿಯಲ್ಲಿ ಮುಕ್ತಾಯ ಆಗುವುದೂ ಇದೆ. ಕಾದಂಬರಿಯೊಂದು ಬೇಡುವ ಶ್ರಮ, ಸಮಯ, ಮುಗ್ನತೆ ನನ್ನಿಂದ ಪೂರೈಸಲು ಕಷ್ಟವಾದ್ದರಿಂದ ಸಣ್ಣ ಕತೆಗಳ ಪ್ರಕಾರ ನನಗೆ ಹೆಚ್ಚು ಪ್ರಿಯ. ನನ್ನ ಇತಿ ಮಿತಿ, ಸಾಮರ್ಥ್ಯಗಳ ಅಳವಿನಲ್ಲಿ ನನಗೆ ಸಾಧ್ಯ ಅನಿಸಿದ್ದನ್ನು ನಾನು ಬರೀತೀನಿ.

- **ಕತೆಯೊಂದರ ತಂತ್ರ ಮತ್ತು ನಿರೂಪಣಾ ವಿಧಾನದ ಬಗ್ಗೆ ನಿಮ್ಮ ಯೋಜನೆಗಳೇನು? ಕತೆಗಾರಿಕೆಯಲ್ಲಿ ಅದೆಷ್ಟು ಮುಖ್ಯ ಮತ್ತು ನೀವು ಅದನ್ನು ಹೇಗೆ ನೋಡುತ್ತೀರಿ? ಅದೆಲ್ಲಾ ಅಪ್ರಜ್ಞಾಪೂರ್ವಕವೇ ಅಥವಾ ಮೊದಲೇ ಯೋಚಿಸಿದ್ದೇ?**

ಕಥಾ ವಸ್ತುವಿಗೆ ಸೂಕ್ತವಾಗುವಂತೆ ಇಂತಾ ಕತೆಯನ್ನು ಹೀಗೆ ಹೇಳಿದರೆ ಅದನ್ನು ಮನಮುಟ್ಟುವಂತೆ ಹೇಳಬಹುದು ಅನ್ನುವುದು ಅಭ್ಯಾಸಬಲದಿಂದ ಗೊತ್ತು ಮಾಡಿಕೊಂಡಿರುವ ಒಂದು ಅನುಭವ. ಕತೆ ಹೀಗೆಯೇ ಮುಂದುವರಿಯಬೇಕು. ಹೀಗೆಯೇ ಕೊನೆಗೊಳ್ಳಬೇಕು ಎನ್ನುವ ಕಟ್ಟುಪಾಡು ಅಥವಾ ಪ್ರಜ್ಞಾಪೂರ್ವಕವಾದ ನಿರ್ಧಾರ ಬರವಣಿಗೆಗೆ ಸಾಧ್ಯವಾಗದಿರುವಂಥದ್ದು. ಹರಿವ ನೀರು ತನ್ನ ಪಥವನ್ನು ತಾನೇ ಕಂಡುಕೊಳ್ಳುವಂತೆ ಕಥಾಪಾತ್ರಗಳು ತಮ್ಮ ದಿಕ್ಕನ್ನು ತಾವೇ ಹುಡುಕಿಕೊಳ್ಳುತ್ತವೆ. ಏನಿದ್ದರೂ ಒಂದು ಹಂತದವರೆಗೆ ಲೇಖಕರಿಗೆ ನಿಯಂತ್ರಣ. ಪೂರ್ವಯೋಜಿತವಲ್ಲದ ಎಷ್ಟೋ ಘಟನೆಗಳು, ಸಂಭವಗಳು